# ಕಾಶ್ಮೀರ: ಭಾವ ಸರೋವರ

ನಾನು ಕಾಶ್ಮೀರವನ್ನು ನೋಡಿರುವವನಲ್ಲ; ಮುಂದೆ ಎಂದಾದರೂ ನೋಡುತ್ತೇನೋ ಇಲ್ಲವೋ – ಗೊತ್ತಿಲ್ಲ. ನೋಡಲೇಬೇಕೆಂಬ ಹಠವೂ ಇಲ್ಲ; ನೋಡಲಾಗದೆಹೋದರೆ ಖೇದಕ್ಕೂ ಅವಕಾಶ ಇಲ್ಲ. ಕಾಶ್ಮೀರ ಎಂಬುದು ನನ್ನ ಪಾಲಿಗೆ ಸ್ವಾತಂತ್ರ್ಯೋತ್ತರದಲ್ಲಿ ಈ ದೇಶಕ್ಕೆ ಸೇರಿಕೊಂಡ ಒಂದು ಸಣ್ಣ ಭೂಭಾಗವಲ್ಲ; ನನ್ನ ದೇಶದ ಸಾವಿರಾರು ವರ್ಷಗಳ ಪ್ರಜ್ಞಾವಾಹಿನಿಯ ಭವ್ಯಕೇಂದ್ರವಾಗಿ ಸದಾ ನನ್ನ ಜೊತೆಯಲ್ಲಿಯೇ ಇರುವ ಭಾವಪ್ರಪಂಚವದು. ಅದು ಶಾರದಾಪೀಠವೇ ಹೌದೆನ್ನಿ: 'ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನೀ'. ಆ ಶಾರದೆಯ ಅರಿವಿನ ಅಂಗಳದಲ್ಲಿ ನನ್ನದಾಗಿಸಿಕೊಂಡಿರುವ ರಸಾನುಭವಗಳು ಒಂದೇ? ಎರಡೇ?

ಕಾಶ್ಮೀರ ಎಂದಕೂಡಲೇ ನನ್ನ ಮನಸ್ಸಿನ ಭಿತ್ತಿಯಲ್ಲಿ ಮೂಡುವ ಹಲವು ಚಿತ್ರಗಳಲ್ಲಿ ಪ್ರಮುಖವಾದುದು – ವಿಶ್ವಮೂರ್ತಿಯಾದ ನಟರಾಜ; ಅವನು ಕಾಶ್ಮೀರದಲ್ಲಿಯೇ ಅವತರಿಸಿದ ಮಹಾನಟ. ಇಡಿಯ ಸೃಷ್ಟಿಗೆ ಮೂಲವಾಗಿರುವ ಚೈತನ್ಯಕ್ಕೊಂದು ಮೂರ್ತರೂಪವನ್ನು ಒದಗಿಸಿದ ಆ ನೆಲದ ರಸದೃಷ್ಟಿಯೇ ಅಪೂರ್ವವಾದುದು. ನಟರಾಜನ ಕಲ್ಪನೆ ಭಾರತೀಯ ಕಲಾಪ್ರಪಂಚಕ್ಕೊಂದು ದಾರ್ಶನಿಕ ಆಯಾಮವನ್ನು ಒದಗಿಸಿತು. ಭಾರತೀಯ ಕಲಾದೃಷ್ಟಿಗೆ ನಟರಾಜತತ್ತ್ವ ಬಿಂದುವಾಗಿ ಒದಗಿದರೆ, ಕೃಷ್ಣತತ್ತ್ವ ಅದರ ಸಿಂಧುರೂಪವಾಗಿ ಸಿದ್ಧಿಸಿತು. ಭಾರತೀಯ ದರ್ಶನಪರಂಪರೆಗೆ ಸೌಂದರ್ಯದ ಸಂವೇದನೆಯನ್ನೂ, ಕಲಾಪರಂಪರೆಗೆ ದಾರ್ಶನಿಕತೆಯ ಗಹನತೆಯನ್ನೂ ಸೂತ್ರೀಕರಿಸಿದ್ದು ಕಾಶ್ಮೀರದ ಈ ಶಿವಕಾಣ್ಕೆಯೇ ಹೌದು. ಅಲ್ಲಿಯ ಪ್ರತ್ಯಭಿಜ್ಞಾನದರ್ಶನವು ಕಂಡರಿಸಿದ ಶಿವನ ಆನಂದತಾಂಡವವೇ ಚಿದಂಬರದ ನಟರಾಜನ ಕಲ್ಪನೆಗೂ ಮೂಲವಾಯಿತು. ಮಾತ್ರವಲ್ಲ, ಈ ದರ್ಶನದ ಹಲವು ವಿವರಗಳು ನಮ್ಮ ಹಲವರು ವಚನಕಾರರ ಶಿವಾನುಭವಕ್ಕೆ ಒದಗಿದ ದರ್ಶನಸೂತ್ರಗಳೂ ಆದವು.

ಕಾಶ್ಮೀರದಲ್ಲಿ ಇಂದೂ ಹರಿಯುತ್ತಿರುವ 'ಝೀಲಂ', ಅದು ವಿಶ್ವದ ಪ್ರಾಚೀನ ವಾಙ್ಮಯವೆನಿಸಿರುವ ವೇದವು ಸ್ತುತಿಸಿರುವ ವಿತಸ್ತಾನದಿಯೇ. ಸಾವಿರಾರು ವರ್ಷಗಳಿಂದ ನಿರಂತರವಾಗಿ ಹರಿದುಬಂದಿರುವ ಶ್ರುತಿಪರಂಪರೆಯೊಂದಿಗೇ ನನ್ನ ಭಾವಕಾಶ್ಮೀರದ ಸರಸ್ವತೀತತ್ತ್ವವೂ ಭಾವ–ಬುದ್ಧಿಗಳಲ್ಲಿ ವಿಹರಿಸುತ್ತಿರುತ್ತದೆ. ಈ ವಿಹಾರದಲ್ಲಿ ಎಷ್ಟೆಲ್ಲ ಪ್ರತಿಭೆಗಳು ನನ್ನ ಜೊತೆಯಾಗುತ್ತವೆ ಎಂದು ಲೆಕ್ಕಿಸಲು ತೊಡಗಿದರೆ ಮೈ ರೋಮಾಂಚನಗೊಳ್ಳುತ್ತದೆ. ಆನಂದವರ್ಧನ, ಅಭಿನವಗುಪ್ತ, ಕ್ಷೇಮೇಂದ್ರ, ಕುಂತಕ, ಮಹಿಮಭಟ್ಟ, ಕ್ಷೇಮರಾಜ, ಜಯರಥ, ವಸುಗುಪ್ತ, ಕಲ್ಲಟ, ಕಲ್ಹಣ, ಬಿಲ್ಹಣ, ಸೋಮದೇವ, ಭಾಮಹ, ವಾಮನ, ಉದ್ಭಟ, ರುದ್ರಟ, ಭಟ್ಟತೌತ, ಮಮ್ಮಟ, ರುಯ್ಯಕ, ಸೋಮಾನಂದ, ಉತ್ಪಲ, ರಾಜಾನಕ ರಾಮಕಂಠ, ಲಲ್ಲಾ, ಕ್ಷೀರಸ್ವಾಮಿ, ವಲ್ಲಭ, ಕಾಮಂದಕ, ಶಾರ್ಙ್ಗದೇವ – ಒಬ್ಬರೇ ಇಬ್ಬರೇ, ನೂರಾರು ಮಹಾಮಹಿಮರು ಆ ನೆಲದ ಸಾರಸ್ವತನಿಧಿಗಳೇ ಆಗಿದ್ದಾರೆ. ಇವರಲ್ಲಿ ಕವಿಗಳಿದ್ದಾರೆ, ಇತಿಹಾಸಕಾರರಿದ್ದಾರೆ, ವೈಯಾಕರಣಿಗಳಿದ್ದಾರೆ, ಆಲಂಕಾರಿಕರಿದ್ದಾರೆ, ದಾರ್ಶನಿಕರಿದ್ದಾರೆ, ಸಂಗೀತಶಾಸ್ತ್ರಜ್ಞರಿದ್ದಾರೆ, ಯೋಗಿಗಳಿದ್ದಾರೆ, ವ್ಯಾಖ್ಯಾನಕಾರರಿದ್ದಾರೆ – ಒಟ್ಟು ಭಾರತೀಯ ವಿದ್ಯೆಯ ಪ್ರತಿನಿಧಿಗಳೆಲ್ಲರೂ ಇದ್ದಾರೆನ್ನಿ! ಇವರೆಲ್ಲ ಸುಮಾರು ಸಾವಿರ ವರ್ಷಗಳಿಂದ ಹಿಡಿದು ಸಾವಿರದೈನೂರು ವರ್ಷಗಳ ಹಿಂದಿನವರು; ಆದರೆ ಇವರು ಪ್ರತಿನಿಧಿಸಿದ ವಿವರಗಳು ಮಾತ್ರ ದೇಶ–ಕಾಲಗಳ ಹಂಗನ್ನು ಮೀರಿದಂಥವೇ ಸರಿ.

ನನ್ನ ಬಲವಾದ ನಂಬಿಕೆ ಕಾಳಿದಾಸ ಕೂಡ ಕಾಶ್ಮೀರದವನೇ. ಭಾರತದ ಎಲ್ಲ ಭಾಗಗಳ ವಿದ್ವಾಂಸರೂ ಸಹೃದಯರೂ ಅವನನ್ನು 'ನಮ್ಮ ಪ್ರಾಂತದವನು' ಎಂದು ವಾದಿಸಿದ್ದಾರೆ, ಆದರಿಸಿದ್ದಾರೆ. ಈ ಪ್ರೀತಿಗೂ ಹೆಮ್ಮೆಗೂ ಕಾರಣವೂ ಇಲ್ಲದಿಲ್ಲ. ಅವನ ಕಾವ್ಯಪ್ರಪಂಚವೇ ಅದಕ್ಕೆ ಕಾರಣ. ಅವನು ಭಾರತದ ನಾಲ್ಕು ದಿಕ್ಕುಗಳ ಎಲ್ಲ ಪ್ರದೇಶದ ಭೌಗೋಳಿಕ ವಿವರಗಳನ್ನೂ ಸಾಮಾಜಿಕ ಮೌಲ್ಯಗಳನ್ನೂ ತನ್ನ ಕೃತಿಗಳಲ್ಲಿ ಕಂಡರಿಸಿದ್ದಾನೆ.



## ಝೀಲಂ ನದಿ ಜೀವಚೈತನ್ಯ

ಕಾಶ್ಮೀರಿ ಕಣಿವೆಯಲ್ಲಿ ಆಗೀಗ ಬೀಳುವ ಸೂರ್ಯರೇಕುಗಳಲ್ಲಿ ಹೊಳೆಯುತ್ತ ಹರಿಯುವ ಸುಂದರಿ ಝೀಲಂ. 725 ಕಿಲೋಮೀಟರ್ ಉದ್ದದ ಈ ನದಿ ಕೆಲವು ಕಡೆಗಳಲ್ಲಿ ಅಂತರ್ಗಾಮಿಯಾಗುತ್ತದೆ.

ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳಲ್ಲಿ ಹರಿಯುವ ಐದು ನದಿಗಳಲ್ಲಿ ಜೇಲಂ ನದಿಯೂ ಒಂದು. ಋಗ್ವೇದದಲ್ಲಿ ಈ ನದಿಯನ್ನು 'ವಿತಸ್ತಾ' ಎಂದು ಉಲ್ಲೇಖಿಸಲಾಗಿದೆ.

ಅಂಜುಮ್ ಸುಲ್ತಾನ್ ಶಹಬಾಜ್ ಎಂಬ ಲೇಖಕನ ಪ್ರಕಾರ ಜಲ್ ಮತ್ತು ಹಮ್ ಎಂಬ ಎರಡು ಶಬ್ದಗಳು ಸೇರಿ ಝೀಲಂ ಆಗಿದೆ. ಜಲ್ ಎಂದರೆ ಶುದ್ಧ ನೀರು ಮತ್ತು ಹಮ್ ಎಂದರೆ ಹಿಮ ಎಂಬ ಅರ್ಥವಿದೆ. ಹಿಮಾಲಯದ ಹಿಮಕರಗಿ ಹರಿಯುವ ನದಿಯಾಗಿದ್ದರಿಂದ ಝೀಲಂ ಎಂಬ ಹೆಸರು ಬಂದಿರಬೇಕು ಎನ್ನವುದು ಅವನ ಊಹೆ.

ಕಾಶ್ಮೀರದ ಪಿರ್ ಪಂಜಲ್ ಎಂಬ ಜಾಗದಲ್ಲಿ ಹುಟ್ಟುವ ಈ ನದಿ, ಝೀಲಂ ಎಂಬ ಜಿಲ್ಲೆಯಲ್ಲಿ ಪಂಜಾಬ್ ಪ್ರಾಂತ್ಯವನ್ನು ಪ್ರವೇಶಿಸುತ್ತದೆ. ಝೂಂಗ್‌ನ ಟ್ರಿಮ್ಮು ಜಿಲ್ಲೆಯಲ್ಲಿ ಚೇನಾಬ್ ನದಿಯಲ್ಲಿ ವಿಲೀನಗೊಳ್ಳುತ್ತದೆ.